ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ
ಚಿಕ್ಕೋಡಿ, ಸಾಃ ಚಿಕ್ಕೋಡಿ.

**ಸಿ.ಸಿ.ನಂ. 2947/2017**

*****

1. ಶ್ರೀ ಬೀರೇಶ್ವರ ಕೋ-ಆಫ್‌ಕ್ರೇಡಿಟ್ ಸೊಸೈಟಿ ಲಿಮಿಟೇಡ್
ಯಕ್ಸಂಬಾ(ಮಲ್ಟಿ ಸ್ಟೇಟ್), ಬೆಡಕಿಹಾಳ, ಜಿಃ ಬೆಳಗಾವಿ.
ಇವರ ಪರವಾಗಿ ಪ್ರತಿನಿಧಿಸುವವರು ಬ್ಯಾಂಚ್ ಮ್ಯಾನೇಜರ
ಶ್ರೀ.ದಯಾನಂದ ರಾವಸಾಬ ಮಗದಮ್ಮ

....... ಪಿರ್ಯಾದಿದಾರ

-/ವಿರುದ್ಧ/-

1. ಶ್ರೀ ಅಶೋಕ ಲಕ್ಷ್ಮಣ ರೊಹಿದಾಸ

....... ಆರೋಪಿ

= = = = =

ದಂಡ ಪ್ರಕ್ರಿಯಾ ಸಂಹಿತೆ
**ಕಲಂ. 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ**

ಪ್ರಶ್ನೆ 1 : ಈ ಪ್ರಕರಣದ ಸಾಕ್ಷಿದಾರರು ನುಡಿದಿರುವ ಸಾಕ್ಷ್ಯಗಳನ್ನು ಕೇಳಿರುವಿರಾ ?

ಉತ್ತರ : ಕೇಳಿದ್ದೇನೆ

.ಪ್ರಶ್ನೆ 2 ಫ್ರಾಸಾ.1 ಪಿರ್ಯಾದಿ ರಾಜು ತುಕಾರಾಮ ಖಾಮಕರ ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತನು ತಮ್ಮ ಸಹಕಾರಿ ಸಂಘದ ಸದಸ್ಯನಿದ್ದು, ದಿನಾಂಕಃ 10.03.2016 ರಂದು ಆರೋಪಿತನು ತಮ್ಮ ಸಹಕಾರಿ ಸಂಘದಿಂದ ರೂ.4,25,000/-(ನಾಲ್ಕು ಲಕ್ಷ್ಯ ಇಪ್ಪತ್ತೈದು ಸಾವಿರ ರೂಪಾಯಿಗಳು)ಗಳನ್ನು ಎಂ.ಟಿ.ಸಾಲದ ಖಾತೆ ನಂ.19 ರ ಅಡಿಯಲ್ಲಿ ಸಾಲವನ್ನು 17% ಬಡ್ಡಿ ದರದಲ್ಲಿ ತೆಗೆದುಕೊಂಡಿದ್ದು, ಅದನ್ನು ವರ್ಷದ ಕಂತುಗಳಲ್ಲಿ ತೀರಿಸುವುದಾಗಿ ಒಪ್ಪಿಕೊಂಡಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : ಸುಳ್ಳು

ಪ್ರಶ್ನೆ 3 : ಫ್ರಾಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿತನು ಒಪ್ಪಿಕೊಂಡಂತೆ ಸಾಲದ ಹಣ ಮತ್ತು ಅದರ ಬಡ್ಡಿಯನ್ನು ಮರುಪಾವತಿಸಿರುವುದಿಲ್ಲ. ಸದರಿ ಸಾಲದ ಹಣ ರೂ.4,62,254/-ಗಳನ್ನು ಸಂದಾಯ ಮಾಡಲು ಆರೋಪಿತನು ದಿನಾಂಕಃ 07.04.2017 ರಂದು ತನ್ನ ಖಾತೆ ನಂಃ 05240100005176

ಇರುವ ಬರೋಡಾ ಬ್ಯಾಂಕ, ಬೆಡಿಕಿಹಾಳ ಶಾಖೆಯ ಚಕ್ಕ ನಂಃ 00008 ನೇದ್ದರ ಮೊತ್ತ ರೂ.4,62,254/-ಗಳ ಚೆಕ್ಕನ್ನು ನೀಡಿದನು ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : ಸುಳ್ಳು

ಪ್ರಶ್ನೆ 4 ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಚಕ್ಕನ್ನು ಪಿರ್ಯಾದಿ ರವರು ನಗದಿಕರಣಕ್ಕಾಗಿ ತಮ್ಮ ಖಾತೆ ಇರುವ ಕಾರ್ಪೊರೇಶನ್ ಬ್ಯಾಂಕ, ಚಿಕ್ಕೋಡಿ ಶಾಖೆಯಲ್ಲಿ ಸಲ್ಲಿಸಿದ್ದನು. ಸದರಿ ಬ್ಯಾಂಕ ಅಧಿಕಾರಿಗಳು ಸದರಿ ಚಕ್ಕನ್ನು ನೀಡಿದ ಖಾತೆದಾರನ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂಬ ಹಿಂಬರಹದೊಂದಿಗೆ ದಿನಾಂಕಃ 04.05.2017 ರಂದು ಪಿರ್ಯಾದಿ ರವರಿಗೆ ಮೆಮೋ ದೊಂದಿಗೆ ಮರಳಿ ನೀಡಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : ಸುಳ್ಳು

ಪ್ರಶ್ನೆ5 ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತಾನು ಸದರಿ ಚೆಕ್ಕ ಅಮಾನ್ಯಗೊಂಡಿದ್ದರಿಂದ ಚೆಕ್ಕಿನ ಹಣವನ್ನು ನೀಡುವಂತೆ ಆರೋಪಿತನಿಗೆ ದಿನಾಂಕಃ22.05.2017 ರಂದು ತಮ್ಮ ನ್ಯಾಯವಾದಿಗಳ ಮುಖಾಂತರ ನೊಂದಾಯಿತ ಅಂಚೆ ಮೂಲಕ ನೀಡಿದ್ದರು. ಸದರಿ ನೋಟಿಸ್ಸು ಆರೋಪಿತನಿಗೆ ತಲುಪಿದ್ದರೂ ಸಹ ಚಕ್ಕಿನ ಹಣವನ್ನು ನೀಡಲಿಲ್ಲ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ ಸುಳ್ಳು

ಪ್ರಶ್ನೆ6 ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿತನು ನೀಡಿದ ಚೆಕ್ಕು ಅಮಾನ್ಯಗೊಂಡು ಹಣ ಸಂದಾಯವಾಗದೆ ಇರುವುದರಿಂದ ಆರೋಪಿತನು ಲಿಖಿತ ವರ್ಗಾವಣೆಗಳ ಕಾಯ್ದೆ ಕಲಂ 138 ರ ಅಡಿಯಲ್ಲಿ ಅಪರಾಧ ಎಸಗಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರ ಸುಳ್ಳು

ಪ್ರಶ್ನೆ7 : ಈ ಮೊಕದ್ದಮೆಯಲ್ಲಿ ನೀವು ಬೇರೆ ಏನಾದರೂ ಹೇಳುವುದು ಇದೆಯಾ?

ಉತ್ತರ : ಇಲ್ಲ

ಪ್ರಶ್ನೆ8 : ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಅಥವಾ ಹಾಜರುಪಡಿಸಲು ದಾಖಲೆಗಳು ಏನಾದರೂ ಇದೆಯಾ?

ಉತ್ತರ : ಇಲ್ಲ

(ಪ್ರಶ್ನೋತ್ತರಗಳನ್ನು ಸಿದ್ದಪಡಿಸಿ, ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಆತನನ್ನು ಪ್ರಶ್ನಿಸಿ, ಆತನು ನೀಡಿದ ಉತ್ತರವನ್ನು ಖುದ್ದಾಗಿ ಬರೆದುಕೊಂಡಿರುತ್ತೇನೆ, ಸರಿಯಾಗಿದೆ.)

ಸ್ಥಳ : ಚಿಕ್ಕೋಡಿ.
ದಿನಾಂಕ : 11.01.2023

(ಚಿದಾನಂದ ಬಡಿಗೇರ)
ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು,
ಚಿಕ್ಕೋಡಿ.